ತೋರಿ ಆಕೆ ಸಿಕ್ಕದಂತೆ ಮಾಡಿಬಿಟ್ಟರೆ? ಇಲ್ಲೀತನಕ ಮಾಡಿದ ಪ್ರಯತ್ನವೆಲ್ಲಾ ನೆಗೆದು ಬೀಳ್ತದೆ ಅಷ್ಟೆ!

ಅವನನ್ನು ಒಳಗೆ ಕುಳ್ಳಿರಿಸಿ ಆ ಹೆಂಗಸು ಉಸ್ಮಾನನಿಗೆ ಕಾಲ್ ಮಾಡಿದ ನಂಬರಿನ ವಿಳಾಸ ತೆಗೆಸಿದೆ. ನಗರದ ಹೊರಭಾಗದ ಏರಿಯಾವೊಂದನ್ನು ತೋರಿಸುತ್ತಿತ್ತು. ಸಿಮ್ ವಿಳಾಸ ಹಸೀನಾ ಅಂತ ಇದ್ದುದರಿಂದ ಅವಳದೇ ಹೆಸರೆಂದು ಊಹಿಸಬಹುದಿತ್ತು. ಹೆಚ್ಚಿನ ವಿಳಂಬ ಮಾಡುವಂತಿರಲಿಲ್ಲ. ತಕ್ಷಣ ಅಪರಾಧ ವಿಭಾಗದ ಸಿಬ್ಬಂದಿ ಹಾಗೂ ಖಾಸಗಿ ಕಾರೊಂದನ್ನು ಬರಹೇಳಿದೆ.

## ಕೊನೇ ಆಪರೇಷನ್ನು!

ಅದು ನನಗೆ ಸಂಪೂರ್ಣ ಅಪರಿಚಿತವಾದ ಪ್ರದೇಶವೇನಲ್ಲ. ಅದಕ್ಕೆ ಹೊಂದಿಕೊಂಡಿದ್ದ ಏರಿಯಾದಲ್ಲಿ ಪ್ರಮೋಷನ್‌ಗೂ ಮೊದಲು ಎಸ್‌ಐ ಆಗಿದ್ದೆ. ಕೆಲವರು ಈಗಲೂ ಸಂಪರ್ಕದಲ್ಲಿದ್ದರು. ಅವರಲ್ಲಿ ಸುಲೇಮಾನ್ ಎಂಬಾತ ಕೊಂಚ ನಂಬಿಕಸ್ಥನಾದ್ದರಿಂದ ಅವನನ್ನು ಕರೆಸಿಕೊಂಡೆ. ಮೆಲ್ಲನೆ ಆಕೆಯ ಬಗ್ಗೆ ಪ್ರಸ್ತಾಪಿಸಿದೆ. 'ಓ... ಅವಳಾ ಸಾರ್?...' ಅನ್ನುತ್ತಾ ದೊಡ್ಡದಾಗಿ ರಾಗ ಎಳೆದ.

'ಗೊತ್ತಾತು ಬಿಡಿ ಸಾರ್... ಯಾರನ್ನ ಹುಡಿಕ್ಕಂಡ್ ಬಂದಿದಿರಾಂತ... ಈ ಸಾರಿ ಏನ್ ಮಾಡೌಳೆ ಸಾರ್ ಅವ್ಳು?...' ಕೇಳಿದ.

ತನಿಖೆ ಅಂದ್ರೆ ಪ್ರಶ್ನೆ ಕೇಳೋರಿಗೆಲ್ಲ ಮಾಹಿತಿ ಕೊಡೋದಲ್ಲ, ಪಡೆಯೋದು!

'ಆಕೆ ಬಗ್ಗೆ ಏನೇನ್ ಗೊತ್ತು, ಎರಡ್ ನಿಮಿಷದಾಗೆ ಎಲ್ಲಾ ಒದರು...' ವಾಹನದ ಸೀಟಿಗೊರಗುತ್ತಾ ನಿರಾಳವಾದೆ. ರಾತ್ರಿಯ ಜನಸಂಚಾರ ಕಡಿಮೆಯಾಗುವ ತನಕ ಕಾಯಬೇಕಿತ್ತು. ಅದಕ್ಕೆ ಇನ್ನೂ ಕೊಂಚ ಸಮಯವಿತ್ತು. ಆಕೆ ಸ್ಥಳೀಯಳು ಎನ್ನುವುದು ಒಂದು ಕಾರಣವಾಗಿದ್ದರೆ, ಅವಳ ಬಗ್ಗೆ ಗೊತ್ತಿರೋರು ಹಲವರಿದ್ದಾರೆ. ಇಷ್ಟಿದ್ದರೆ ಸಾಕು, ಆಕೆಯನ್ನು ಹುಡುಕಿ ತೆಗೆಯೋದು ಕಷ್ಟದ ಮಾತಲ್ಲ.

'ಮೊದಲ್ನೇ ಗಂಡನ್ನ ಬಿಟ್ಬೌಳೆ ಸಾರ್... ಎರಡನೆಯವ್ನ ಜೊತೇಗಿದ್ದಾಳೆ. ಅವ್ನು ಇಲ್ಲಿಯವನಲ್ಲ ಕೋಲ್ಕತ್ತಾ ಕಡೆಯವ್ನು, ಯಾವ್ದೋ ಮೊಬೈಲ್ ಅಂಗ್ಡೀಲಿ ಕೆಲ್ಸಕ್ಕಿದ್ದಾನೆ. ಇವ್ಳೂ ಮೊದ್ಲು ಕಂಪನಿ ಒಂದ್ರಾಗೆ ಹೌಸ್‌ಕೀಪಿಂಗ್ ಸೆಕ್ಷನ್‌ನಲ್ಲಿದ್ಳು. ಈಗ ಅಲ್ಲಿ ಇಲ್ಲಿ ತಿರುಗಿಕೊಂಡಿರ್ತಾಳೆ. ಇಲ್ಲಿನ ಪೊಲೀಸ್ ಸ್ಟೇಷನ್ನಾಗೂ ಅವಳ ಮೇಲೆ ಸಣ್ಣ ಪುಟ್ಟ ಕಳ್ಳನದ ಕೇಸುಗಳಿದ್ದಾವೆ...' ವಿವರಗಳನ್ನು ಕೊಡುತ್ತಾ ಹೋದ ಸುಲೇಮಾನ್.

'ಆಕೆಗೆ ಎಷ್ಟು ಜನ ಮಕ್ಳು?...' ಮಧ್ಯೆ ಪ್ರಶ್ನೆಯೊಂದನ್ನು ತೂರಿದೆ.

'ಇಬ್ರಿದಾರೆ ಸಾರ್... ಇಬ್ರೂನೂ ಮೊದಲ ಗಂಡಂಗೇ ಹುಟ್ಟಿದೋರು... ದೊಡ್ಡೋನು ಐಸ್ಕ್ರೀಂ ಫ್ಯಾಕ್ಟ್ರೀಲಿ ಕೆಲ್ಸ ಮಾಡ್ತಾನೆ. ಚಿಕ್ಕೋನು ಇಲ್ಲೇ ಗೌರ್ಮೆಂಟು ಶಾಲೆಗೆ ವೋಯ್ತಾನೆ...'

ಅಂಗಡಿಗಳೆಲ್ಲಾ ಮುಚ್ಚಿ ಮುಖ್ಯ ರಸ್ತೆ ನಿರ್ಜನವಾಗುತ್ತಿತ್ತು. ಮನೆಗಳಲ್ಲಿನ ದೀಪಗಳು ಒಂದೊಂದೇ ಆರುತ್ತಾ ಎಲ್ಲರೂ ನಿಧಾನವಾಗಿ ನಿದ್ದೆಗೆ ತೆಕ್ಕೆ ಬೀಳುತ್ತಿದ್ದರು. ಹೆಚ್ಚಿನ ವಿವರಗಳನ್ನು ಕೆದಕಲು ಅದು ವೇಳೆಯಲ್ಲ. ಮೇಲಾಗಿ ಸಮಯವೂ ಇರಲಿಲ್ಲ. ಆಪರೇಷನ್ ಮುಗಿಸಬೇಕಾದ ಜವಾಬ್ದಾರಿ ನನ್ನ ಮೇಲಿತ್ತು.